## ಯಾವ್ ಕಾರ್‌..

ತಿಪ್ಪೇಸಿ ಮೊಬೈಲ್‌ನಲ್ಲಿ ರೀಲ್ಸ್ ನೋಡ್ತಾ ಆರಾಮಾಗಿ ಕೂತಿದ್ದ. ಮೊಬೈಲ್ ರಿಂಗಾಯ್ತು. ಇರುಸುಮುರುಸಿನಿಂದ, 'ಹಲೋ, ಕಾರ್ ಡ್ರೈವಿಂಗ್ ಮಾಡ್ತಿದ್ದೇನೆ, ಆಮೇಲೆ ಮಾಡ್ರಿ' ಎನ್ನುತ್ತಲೇ ಕಟ್ ಮಾಡಿದ. ಕೆಲ ನಿಮಿಷದ ನಂತರ ಮತ್ತೆ ಮೊಬೈಲ್ ರಿಂಗ್ ಆಯಿತು. 'ಡ್ರೈವಿಂಗ್‌ನಲ್ಲಿದ್ದೀನಿ, ಆಮೇಲೆ ಕಾಲ್ ಮಾಡಿ ಅಂತ ಹೇಳಿಲ್ಲವಾ?' ಎನ್ನುತ್ತಾ ಮತ್ತೆ ಕಟ್ ಮಾಡಿದ. ಒಂದೇ ನಿಮಿಷದಲ್ಲಿ ಲ್ಯಾಂಡ್ ಲೈನ್ ಫೋನ್ ರಿಂಗಾಯಿತು. ತಿಪ್ಪೇಸಿ ಅನಾಮಿಕ ಕರೆಗೆ 'ಡ್ರೈವಿಂಗ್‌ನಲ್ಲಿದ್ದೇನೆ ಆಮೇಲೆ ಮಾಡ್ರಿ' ಎನ್ನುತ್ತಾ ಫೋನ್ ಇಡಲು ಅನುವಾದ. ಅತ್ತ ಕಡೆಯಿಂದ, 'ನಾನ್ರೀ, ಗೊತ್ತಾಗ್ಲಿಲ್ಲವ್ವಾ! ನಿಮ್ಮ ಬಾಸು... ಲ್ಯಾಂಡ್‌ಲೈನ್ ಫೋನ್ ಎತ್ತಿ ಡ್ರೈವಿಂಗ್ ಮಾಡ್ತಿದ್ದೀನಿ ಅಂತೀರಲ್ಲ... ಅದು ಯಾವ ಕಾರು?' ಎನ್ನುತ್ತಿದ್ದಂತೆ ತಿಪ್ಪೇಸಿ ಬೆವರಲು ಪ್ರಾರಂಭಿಸಿದ.

**ರಾಮಕೃಷ್ಣ ಗೋಖಲೆ**





ಕಲೆ: ಗಣೇಶ ಆಚಾರ್ಯ

## ಬಾಯಾರಿಕೆ

ಮಹಾನ್ ಜಿಪುಣಾಗ್ರೇಸಿ ಶೀನಿ ಅಂದು ತನಗೆ ಬಿಡುವಾದಾಗ, ತನ್ನ ಪತ್ನಿ ಪಮ್ಮಿಯನ್ನು ವಾಕಿಂಗ್‌ಗೆ ಕರೆದುಕೊಂಡು ಹೋಗಿದ್ದ. ಇಬ್ಬರೂ ಸ್ವಲ್ಪ ದೂರ ಕ್ರಮಿಸುವಷ್ಟರಲ್ಲಿ ಪಮ್ಮಿ, 'ರೀ, ನನಗೆ ತುಂಬಾ ಬಾಯಾರಿಕೆ ಆಗ್ತಿದೆ ಒಂದು ಬಾಟಲ್ ನೀರು ತಂದು ಕೊಡ್ತೀರಾ? ಎಂದು ಕೇಳಿದಳು. ಆಗ ಶೀನಿ, 'ಇಲ್ಲೇ ಹತ್ತಿರದಲ್ಲಿ ಒಳ್ಳೆ ದಹಿ ಕಚೋರಿ ಸಿಗುತ್ತೆ ತಿಂತೀಯಾ?' ಎಂದು ಕೇಳಿದ. ಆಕೆ, 'ರೀ ನಿಮ್ಮ ದಮ್ಮಯ್ಯ ಅದನ್ನು ಮಾತ್ರ ನೆನಪಿಸಬೇಡಿ. ಅದನ್ನು ನೆನಪಿಸಿಕೊಂಡ್ರೆ ಸಾಕು, ನನ್ನ ಬಾಯಿ ತುಂಬಾ ನೀರು ಬರುತ್ತೆ' ಎಂದಳು. ಶೀನಿ, 'ಹಾಗಿದ್ರೆ ಅದನ್ನೇ ಕುಡಿ ಮತ್ಯಾಕೆ ನೀರಿನ ಬಾಟಲ್? ದುಡ್ಡು ಬೇರೆ ದಂಡ...' ಎಂದ.

**ಅರವಿಂದ ಜಿ.ಜೋಷಿ**